ಇ) ಅರ್ಜಿ ಸ್ವೀಕೃತವಾದ 30 ದಿನಗಳ ಒಳಗಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು.

ಸ್ವೀಕೃತವಾದ ಅರ್ಜಿಯನ್ನು ಆಹಾರ ನಿರೀಕ್ಷಕರ ಮುಖಾಂತರ ಸ್ಥಳ ಪರಿಶೀಲನೆ ನಡೆಸಿ ಕ್ರಮಬದ್ಧವಾಗಿದ್ದಲ್ಲಿ ಅರ್ಹ ಪಡಿತರ ಚೀಟಿಯನ್ನು ನಿಗದಿತ ಅವಧಿಯೊಳಗಾಗಿ ವಿತರಿಸಲು ಕ್ರಮ ವಹಿಸಲಾಗುವುದು.

ಯಶಸ್ವಿನಿ ಸ್ವಯಂ ನಿಧಿ ಶಸ್ತ್ರ ಚಿಕಿತ್ಸೆ ಯೋಜನೆ

970 (1506) ಶ್ರೀ ಡಾ/ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಸ್ವಯಂನಿಧಿ ಶಸ್ತ್ರ ಚಿಕಿತ್ಸೆ ಯೋಜನೆಯ ಅನುಷ್ಠಾನ ಏಜೆನ್ಸಿ ಯಾವುದು;

ಆ) ಅನುಷ್ಠಾನ ಏಜೆನ್ಸಿತ ಅವಧಿ ಎಷ್ಟು; ಇದರ ಜವಾಬ್ದಾರಿಗಳೇನು;

ಇ) ಯಾವ್ಯಾವ ಹಂತದ ಸಿಬ್ಬಂದಿಯನ್ನು ಈ ಸಂಸ್ಥೆ ನೇಮಿಸಿದೆ; ಅವರ ಕರ್ತವ್ಯಗಳೇನು;

ಈ) ಅನುಷ್ಠಾನ ಏಜೆನ್ಸಿಗೆ ಸಂದಾಯ ಮಾಡುವ ಮೊತ್ತವೆಷ್ಟು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯ ಅನುಷ್ಠಾನವನ್ನು ನೋಡಿಕೊಳ್ಳಲು ಭಾರತೀಯ ವಿಮಾ ನಿಯಂತ್ರಣ ಪ್ರಾಧಿಕಾರದಿಂದ ಲೈಸನ್ಸ್ ಹೊಂದಿರುವ ಮೆ. ಪ್ಯಾಮಿಲಿ ಹೆಲ್ತ್ ಪ್ಲಾನ್ ಲಿಮಿಟೆಡ್ ಹೈದರಾಬಾದ್, ಈ ಕಂಪನಿಯನ್ನು ಅನುಷ್ಠಾನ ಏಜೆನ್ಸಿಯೆಂದು ನೇಮಕ ಮಾಡಲಾಗಿರುತ್ತದೆ.

ಆ) ಮೆ. ಪ್ಯಾಮಿಲಿ ಹೆಲ್ತ್ ಪ್ಲಾನ್ ಲಿಮಿಟೆಡ್ ಹೈದರಾಬಾದ್, ಈ ಕಂಪನಿಯನ್ನು ಅನುಷ್ಠಾನ ಏಜೆನ್ಸಿಯಾಗಿ ದಿ: 01.06.2007 ರಿಂದ 31.05.2009ರವರೆಗೆ ಎರಡು ವರ್ಷಗಳಿಗೆ ನೇಮಕ ಮಾಡಲಾಗಿದ್ದು, ಮತ್ತೆ ಒಂದು ವರ್ಷದ ಅವಧಿಗೆ ಅಂದರೆ ದಿ: 01.06.2009 ರಿಂದ ದಿ: 31.05.2010ರವರೆಗೆ ಮುಂದುವರೆಸಲಾಗಿದೆ.

ಅನುಷ್ಠಾನ ಏಜೆನ್ಸಿಯು ರಾಜ್ಯಾದ್ಯಾಂತ ಟ್ರಸ್ಟ್‌ನಿಂದ ಗುರುತಿಸಲ್ಪಟ್ಟ ನೆಟ್‌ವರ್ಕ್ ಆಸ್ಪತ್ರೆಗಳ ಮೂಲಕ ಯಶಸ್ವಿನಿ ಯೋಜನೆಯನ್ನು ಕಾರ್ಯಗತ

ಗೊಳಿಸುವ ಪೂರ್ಣ ಜವಾಬ್ದಾರಿಯನ್ನು ಹೊಂದಿರುತ್ತದೆ. ಇವುಗಳಲ್ಲಿ ಈ ಕೆಳಗಿನವುಗಳು ಮುಖ್ಯವಾದ ಜವಾಬ್ದಾರಿಗಳಾಗಿರುತ್ತದೆ.

1. ಯೋಜನೆಯ ಅನುಷ್ಠಾನಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ಒದಗಿಸುವುದು.
2. ಫಲಾನುಭವಿಗಳಿಗೆ ಯಶಸ್ವಿನಿ ಗುರುತಿನ ಚೀಟಿ ನೀಡುವಲ್ಲಿ ಟ್ರಸ್ಟ್ ಹಾಗೂ ಇಲಾಖಾಧಿಕಾರಿಗಳಿಗೆ ಸಹಕರಿಸುವುದು.
3. ಯೋಜನೆಯಲ್ಲಿ ಲಭ್ಯವಿರುವ ಚಿಕಿತ್ಸಾ ಸೌಲಭ್ಯಗಳ ಬಗ್ಗೆ ಫಲಾನುಭವಿಗಳಿಗೆ ಅರಿವು ಮೂಡಿಸುವುದರ ಜೊತೆಗೆ ಫಲಾನುಭವಿಗಳು ಯೋಜನೆಯಲ್ಲಿ ಗುರುತಿಸಲ್ಪಟ್ಟ ಆಸ್ಪತ್ರೆ ಗಳಲ್ಲಿ ಚಿಕಿತ್ಸೆ ಪಡೆಯಲು ಸಹಕರಿಸುವುದು.
4. ನೆಟ್‌ವರ್ಕ್ ಆಸ್ಪತ್ರೆಗಳನ್ನು ಗುರುತಿಸುವಲ್ಲಿ ಟ್ರಸ್ಟಿಗೆ ಸಹಾಯ ಮಾಡುವುದು.
5. ಯಶಸ್ವಿನಿ ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲು ನೆಟ್‌ವರ್ಕ್ ಆಸ್ಪತ್ರೆಗಳಿಗೆ ಪೂರ್ವಾನುಮತಿ ನೀಡುವುದು.
6. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ಹಾಗೂ ದಾಖಲಾತಿಗಳನ್ನು ಟ್ರಸ್ಟ್‌ಗೆ ಒದಗಿಸುವುದು ಹಾಗೂ ನೆಟ್‌ವರ್ಕ್ ಆಸ್ಪತ್ರೆಗಳೊಂದಿಗೆ ಹಾಗೂ ಟ್ರಸ್ಟ್‌ನೊಂದಿಗೆ ಸಮಪರ್ಕ ಸಮನ್ವಯದ ಕಾರ್ಯ ನಿರ್ವಹಿಸುವುದು ಇತ್ಯಾದಿ.
7. ನೆಟ್‌ವರ್ಕ್ ಆಸ್ಪತ್ರೆಗಳಿಂದ ಸ್ವೀಕೃತವಾದ ಬಿಲ್ಲುಗಳ ಪರಿಶೀಲನೆ ಮಾಡಿ ಟ್ರಸ್ಟ್‌ದಿಂದ ಆಸ್ಪತ್ರೆಗಳಿಗೆ ಬಿಲ್ಲು ಪಾವತಿಗೆ ಹಣ ಬಿಡುಗಡೆ ಮಾಡುವ ಇತ್ಯಾದಿ ಕೆಲಸ ಗಳನ್ನು ಮಾಡುವುದು. ಟ್ರಸ್ಟ್‌ನಿಂದ ನೆಟ್‌ವರ್ಕ್ ಆಸ್ಪತ್ರೆಗಳಿಗೆ ಬಿಡುಗಡೆಯಾದ ಹಣವನ್ನು ಆಸ್ಪತ್ರೆಗಳಿಗೆ ಡಿ.ಡಿ/ ಪೇಆರ್ಡರ್ ಮೂಲಕ ಪಾವತಿಸುವುದು. ಆದಾಯ ತೆರಿಗೆ ಮುಂತಾದ ಕಡಿತಗಳನ್ನು ಸಂಬಂಧಿಸಿದ ಇಲಾಖೆಗೆ ಸಂದಾಯ ಮಾಡಿ ದಾಖಲಾತಿಗಳನ್ನು ಟ್ರಸ್ಟ್‌ಗೆ ಒದಗಿಸುವುದು.

ಇ)

1. ಪ್ರತಿ ಜಿಲ್ಲೆಯಲ್ಲಿ ಒಬ್ಬರು ಜಿಲ್ಲಾ ಸಮನ್ವಯಾಧಿಕಾರಿಯನ್ನು ನೇಮಿಸಿದೆ.
2. ಚಿಕಿತ್ಸಾ ಪೂರ್ವಾನುಮತಿ ನೀಡಲು ಕನಿಷ್ಟ ಇಬ್ಬರು ತಜ್ಞ ವೈದ್ಯರನ್ನು ನೇಮಿಸಿದೆ.
3. ಅನುಷ್ಠಾನ ಎಜೆನ್ಸಿಯು ಬೆಂಗಳೂರಲ್ಲಿ ಯೋಜನೆಯ ಅನುಷ್ಠಾನಕ್ಕೆ ಪ್ರತ್ಯೇಕ ಕಛೇರಿಯನ್ನು ಹಾಗೂ ಚಿಕಿತ್ಸಾ ಪೂರ್ವಾನುಮತಿಯನ್ನು ಅಂತರ್ಜಾಲದ ಮೂಲಕ ನೀಡಲು ಅಗತ್ಯ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಅನ್ನು ಹೊಂದಿರುತ್ತದೆ.
4. ಚಿಕಿತ್ಸಾ ಪೂರ್ವಾನುಮತಿ ಹಾಗೂ ನೆಟ್‌ವರ್ಕ್ ಆಸ್ಪತ್ರೆಗಳ ಬಿಲ್ಲುಗಳ ಪರಿಶೀಲನೆಗೆ ಹಾಗೂ ಕಛೇರಿಯ ಇತರೆ ಕೆಲಸಗಳಿಗೆ ಅಗತ್ಯ ಸಿಬ್ಬಂದಿಯನ್ನು ನೇಮಿಸಿದೆ.
5. ಅನುಷ್ಠಾನ ಏಜೆನ್ಸಿ ಯೋಜನೆ ಅನುಷ್ಠಾನಕ್ಕೆ ಅಗತ್ಯವಾದ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ತನ್ನ ಸಿಬ್ಬಂದಿಗೆ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಈ) ಅನುಷ್ಠಾನ ಏಜೆನ್ಸಿಗೆ 2009–10ನೇ ಸಾಲಿಗೆ ರೂ.50,00,000/–ಗಳ (ಎಲ್ಲಾ ತೆರಿಗೆ ಸೇರಿ) ಸೇವಾ ಶುಲ್ಕವನ್ನು ಟ್ರಸ್ಟ್‌ನಿಂದ ಸಂದಾಯ ಮಾಡಲಾಗುತ್ತದೆ.

ಯಶಸ್ವಿನಿ ಆರೋಗ್ಯ ಯೋಜನೆ

971 (1507) ಶ್ರೀ. ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಟ್ರಸ್ಟ್‌ನಲ್ಲಿ ರಾಜ್ಯದ ವಿವಿಧ ಪ್ರದೇಶಗಳ ಹೆಸರಾಂತ ಐವರು ವೈದ್ಯರುಗಳನ್ನು ಟ್ರಸ್ಟೀ ಎಂದು ನೇಮಿಸಬೇಕಾಗಿದ್ದು, ಹೈದಾರಾಬಾದ್ ಕರ್ನಾಟಕ ಪ್ರದೇಶದಿಂದ ಯಾವುದೇ ವೈದ್ಯರನ್ನು ಟ್ರಸ್ಟಿ ಎಂದು ನೇಮಕ ಮಾಡದಿರಲು ಕಾರಣಗಳೇನು;